# ಆಹಾ ಸುದ್ದಿ!

★ ಸಸಿತೋಟ



ಇವೇನು ಗಡೀಪಾರಾದ ನಾಯಿಗಳು ಎಂದುಕೊಂಡ್ರಾ? ವಿದೇಶಿ ಹೋಟೆಲ್‌ಗಳ ಪ್ಲೇಟಿನಲ್ಲಿ ಬೌಬೌ ಖಾದ್ಯವಾಗಿ ಕೂರಲಿಕ್ಕೆ ಗಡಿಯಾಚೆ ಹೊರಟಿದ್ದವು. ಥಾಯ್ಲೆಂಡ್‌ನಲ್ಲಿ ಸೈನಿಕರಿಗೆ ಗಡಿ ಕಾಯುವ ಕೆಲಸದ ಜೊತೆ ಗಡಿ ದಾಟುತ್ತಿದ್ದ ನಾಯಿಗಳ ವ್ಯಾನನ್ನು ಕಾಯುವ ಕೆಲಸವೂ ಹೆಚ್ಚುವರಿಯಾಗಿ ಬಿದ್ದಂತಿದೆ.

ಹುಬ್ಬಳ್ಳಿ-ಧಾರವಾಡ ಕೇಂದ್ರ ವಿಧಾನಸಭಾ ಕ್ಷೇತ್ರದಲ್ಲಿ ಮಾಜಿ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್ ವಿರುದ್ಧ ಸೆಡ್ಡು ಹೊಡೆಯಲು ಭಾರಿ ವ್ಯಕ್ತಿಯೇ ಮುಂದಾಗಿದ್ದ. ಆದರೇನು ಮಾಡುವುದು? ಆತನ ನಾಮಪತ್ರವೇ ತಿರಸ್ಕೃತಗೊಂಡಿತು. ಮೆಟ್ಟೂರಿನ ಡಾ.ಕೆ.ಪದ್ಮರಾಜನ್ ಇದುವರೆಗೆ 146 ಕಡೆ ನಾಮಪತ್ರ ಸಲ್ಲಿಸಿ ಲಿಮ್ಕಾ ದಾಖಲೆ ಸ್ಥಾಪಿಸಿದ್ದಾನೆ. 12 ಲಕ್ಷ ರೂಪಾಯಿಯಷ್ಟು ಠೇವಣಿ ಕಳೆದುಕೊಂಡಿದ್ದಾನೆ. ಸದ್ಯ ಎಲ್ಲಿ ಚುನಾವಣೆ ನಡೆಯುತ್ತದೆ, ಯಾವ ದೊಡ್ಡ ರಾಜಕಾರಣಿ ವಿರುದ್ಧ ನಿಲ್ಲಬೇಕು ಎಂದು ತಲೆ ಕೆಡಿಸಿಕೊಳ್ಳುತ್ತಿದ್ದಾನೆ.



ಚೀನಾದ ಹುಬೈ ಪ್ರಾಂತ್ಯದಲ್ಲಿ ಸಾಂಸ್ಕೃತಿಕ ಕೈಗಾರಿಕೆ ಕೇಂದ್ರದಲ್ಲಿ ಇಬ್ಬರು ಕಲಾವಿದರ ತಲೆಯೊಳಗೆ ಚಾಲನೆಗೊಂಡ 'ಕಾರಾಕೃತಿ'ಯಿದು. ನಾದುರಸ್ತಾಗಿ ಕಸದ ರಾಶಿಯಲ್ಲಿ ಬಿದ್ದಿದ್ದ ಕಾರುಗಳನ್ನು ಎತ್ತಿ ಜೋಡಿಸಿರುವ ಕಲಾವಿದರ ತಲೆಯೇ ತಲೆ. ತೂಕಕ್ಕೆ ಹೋಗಬೇಕಾಗಿದ್ದವು ತೂಗಾಡುತ್ತ ನಿಂತಿವೆ.




ಚೀನಾದಲ್ಲಿ ಬೇಸಿಗೆ ಶುರುವಾಗಿದೆ. 'ಹಾವಿನ ವರ್ಷ'ದ ಸಂಕೇತವಾಗಿ ಬಿಕಿನಿ ಚೆಲುವೆಯರು ಹಾವಿನ ಆಕಾರದಲ್ಲಿ ನಿಂತು ಗಮನ ಸೆಳೆದರು. ಮೈ ಬೆವರಿಳಿಸುವ ಈ ಸೆಕೆಗಾಲವನ್ನು ಸ್ವಾಗತಿಸಲು ಲಲನೆಯರು ಮೈ ಚಳಿ ಬಿಟ್ಟು ಹೊರಬಂದಿರುವುದರಲ್ಲಿ ಅಚ್ಚರಿಯೇನಿಲ್ಲ ಬಿಡಿ.

ಬ್ರಿಟನ್ನಿನಲ್ಲಿ ಆರ್ಥಿಕ ಪರಿಸ್ಥಿತಿ ಎಷ್ಟು ಕುಸಿದಿದೆ ಎಂದರೆ ರಾಜಕುಮಾರ ಚಾರ್ಲ್ಸ್ ತಾವು ತೆರೆದಿದ್ದ ಸಾವಯವ ತರಕಾರಿ ಮತ್ತು ಹಣ್ಣಿನ ಅಂಗಡಿಯನ್ನು ಮುಚ್ಚಿದ್ದಾರಂತೆ. ಬೆಲೆ ಏರಿಕೆ, ಕುಸಿದ ಮಾರಾಟದಿಂದ ಕಂಗೆಟ್ಟ ಚಾರ್ಲ್ಸ್ ಅಂಗಡಿ ಮುಚ್ಚಬೇಕಾಯ್ತಂತೆ. ರಾಜಕುಮಾರನಿಗೆ ಎಂತಹ ಕಾಲ ಬಂತಪ್ಪ!

ಅಮೆರಿಕಾದ ಡೋನಾಲ್ಡ್ ಮತ್ತು ನ್ಯಾನ್ಸಿ ದಂಪತಿ ಕಳೆದ 32 ವರ್ಷಗಳಿಂದ ಒಂದೇ ರೀತಿಯ ಉಡುಪು ಧರಿಸಿ ದಾಖಲೆ ಸ್ಥಾಪಿಸಿದ್ದಾರೆ. ಈ 'ಮ್ಯಾಚಿಂಗ್ ಮ್ಯಾಚಿಂಗ್' ಕ್ರೇಜ್ ಅವರ ಮೆದುಳನ್ನು ಹೊಕ್ಕಿದ್ದು ಹೈಸ್ಕೂಲಿನಲ್ಲಿದ್ದಾಗಲೇ ಅಂತೆ. ಒಂದೇ ಬಗೆಯ 600 ಜೊತೆ ಉಡುಪುಗಳನ್ನು ಇಟ್ಟುಕೊಂಡಿರುವ ದಂಪತಿ ಅಮೆರಿಕದವರು. ಭಾರತದವರಾಗಿದ್ದರೆ ಹೆಂಡತಿಯ ರಾಶಿ ಸೀರೆಗಳಿಗೆ ಮ್ಯಾಚಿಂಗ್ ಹುಡುಕಲು ಗಂಡ ಪರದಾಡಬೇಕಿತ್ತು.

